ಇದು ಸಂಡಿಗೆ ಸಮಯ

ನಮ್ಮ ಬಾಲ್ಯದ ದಿನಗಳ ಬೇಸಿಗೆಯಲ್ಲಿ ಈ ದೃಶ್ಯ ಸಾಮಾನ್ಯವಾಗಿತ್ತು. ಮನೆ ಹೆಣ್ಣುಮಕ್ಕಳೆಲ್ಲ ಸೇರಿ ಮಾಳಿಗೆ ತುಂಬಾ ತೆಳು ಬಟ್ಟೆಯ ಮೇಲೆ ಬಗೆ ಬಗೆಯ ಹಸಿ ಸಂಡಿಗೆ ಮಾಡಿ ಒಣಗಲು ಹಾಕುತ್ತಿದ್ದರು. ಕಾಗೆಗಳಿಂದ ಅವುಗಳನ್ನು ಕಾಪಾಡಲು ನಮ್ಮನ್ನು (ಹುಡುಗರನ್ನು) ಕೂರಿಸುತ್ತಿದ್ದರು. ಹಸಿ ಸಂಡಿಗೆಗಳು ಎಷ್ಟು ರುಚಿ ಇರ್ತಿದ್ದವು ಎಂದರೆ ನಾವೇ ತಿಂದು ಅರ್ಧ ಖಾಲಿ ಮಾಡಿಬಿಡುತ್ತಿದ್ದೆವು. ಹಾಗೇ ಮಾಡಿದ್ದಕ್ಕೆ ಅಜ್ಜಿಯ ಕೈಲಿ ಏಟು ತಿಂದಿದ್ದ ನೆನಪು ಆ ರುಚಿ ಸಂಡಿಗೆಯಷ್ಟೇ ಹಸಿಹಸಿಯಾಗಿದೆ. ಮೊನ್ನೆ ನಮ್ಮ ಪಕ್ಕದ ಮನೆ ಅಜ್ಜಿ ತನ್ನ ಮನೆಯ ಸದಸ್ಯರೊಂದಿಗೆ ಮಾಳಿಗೆ ಮೇಲೆ ಸಂಡಿಗೆ ಹಾಕುತ್ತಿದ್ದರು. ಮನೆಯವರಿಗೆಲ್ಲ ಸಂಡಿಗೆ ಹಾಕುವ ಕಲೆಯ ಬಗ್ಗೆ ಹೇಳಿಕೊಡುತ್ತಿದ್ದದ್ದು ಕಂಡುಬಂತು. ಅವರಲ್ಲಿನ ಕಲೆಯುವ ಉತ್ಸಾಹ ಕಂಡು ಮನಕೆ ಮುದ ನೀಡಿತು.

–ಆರ್.ಟಿ. ಶರಣ್, ಬೆಳಗಾವಿ

ಕೆಂಪು ಕಲ್ಲಿನ ನಿಲ್ದಾಣ!

ಸಾಮಾನ್ಯವಾಗಿ ಬಸ್ ನಿಲ್ದಾಣವೆಂದರೆ ಒಂದು ಮೇಲ್ಛಾವಣಿ, ಕುಳಿತುಕೊಳ್ಳಲು ಕಲ್ಲು ಆಸನ ಬಿಟ್ಟರೆ ಬೇರೇನೂ ಕಾಣದ ಜಾಗ. ಕೆಲವೊಂದು ಬಸ್ ನಿಲ್ದಾಣಗಳು ಆಕರ್ಷಕ ಸ್ವರೂಪದಲ್ಲಿಯೂ ಇರುತ್ತವೆ ಎನ್ನುವುದಕ್ಕೆ ಚಿತ್ರದಲ್ಲಿನ ನಿಲ್ದಾಣವೇ ಸಾಕ್ಷಿ. ದಕ್ಷಿಣ ಕನ್ನಡದ ಪುತ್ತೂರು ತಾಲ್ಲೂಕಿನಲ್ಲಿರುವ ಒಂದು ವಿಶಿಷ್ಟ ಬಸ್ ನಿಲ್ದಾಣ ಈ ಸಾಲಿಗೆ ಸೇರುತ್ತದೆ. ಸಂಪೂರ್ಣ ಕೆಂಪು ಕಲ್ಲಿನಿಂದ ಈ ಬಸ್ ನಿಲ್ದಾಣವನ್ನು ಕಟ್ಟಲಾಗಿದೆ. ಕೆಂಪುಕಲ್ಲಿನಿಂದ ನಿರ್ಮಾಣಗೊಂಡಿರುವುದು ಇದರ ಮೆರುಗು ಹೆಚ್ಚಲು ಕಾರಣವಾಗಿದೆ. ಇದಕ್ಕೆ ಹಚ್ಚಲಾಗಿರುವ ಬಣ್ಣವೂ ರಾಸಾಯನಿಕಮುಕ್ತವಾಗಿದ್ದು, ಪರಿಸರಸ್ನೇಹಿ ಬಸ್ ನಿಲ್ದಾಣವಾಗಿ ರೂಪುಗೊಂಡಿದೆ. ಪುತ್ತೂರಿನ ಆದರ್ಶನಗರದಲ್ಲಿನ ಈ ಬಸ್ ನಿಲ್ದಾಣ ಆಕರ್ಷಣೆಯ ತಾಣ. ಸಮೀಪದ ಆಯುರ್ವೇದ ವೈದ್ಯರ ಕುಟುಂಬವೊಂದು ಈ ಚಿತ್ತಾಕರ್ಷಕ ನಿಲ್ದಾಣವನ್ನು ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಿದೆ.

–ಪಂಚಮಿ ಬಾಕಿಲಪದವು, ದಕ್ಷಿಣ ಕನ್ನಡ

ಕಾಡುಬಸಳೆ ಹೂ ಬಿಟ್ಟಾಗ

ಚಿತ್ರದಲ್ಲಿರುವ ಸಸ್ಯವು 'ಕಲಾಂಚೋ ಪಿನ್ನಾಟಾ'. ಇದನ್ನು ಸಾಮಾನ್ಯವಾಗಿ ಏರ್ ಪ್ಲಾಂಟ್, ಕ್ಯಾಥೆಡ್ರಲ್ ಬೆಲ್ಸ್, ಮಿರಾಕಲ್ ಲೀಫ್ ಅಥವಾ ಕಾಡುಬಸಳೆ ಎಂದು ಕರೆಯಲಾಗುತ್ತದೆ. ಇದರ ವೈಜ್ಞಾನಿಕ ಹೆಸರು 'ಬ್ರಯೋಫಿಲಮ್ ಪಿನ್ನಾಟಮ್'. ಸಾಮಾನ್ಯವಾಗಿ ಕಾಡು ಪ್ರದೇಶಗಳಲ್ಲಿ, ಹೊಲಗಳ ಬದಿಗಳಲ್ಲಿ ಮತ್ತು ಬೇಲಿ ಬಳಿ ಹೆಚ್ಚಾಗಿ ಕಾಣಿಸಿಕೊಳ್ಳುವ ಇದು 3–5 ಅಡಿ ಎತ್ತರಕ್ಕೆ ಬೆಳೆಯುವ ದೀರ್ಘಕಾಲಿಕ ಸಸ್ಯವಾಗಿದ್ದು, ಕಡು ಹಸಿರು ಎಲೆಗಳನ್ನು ಹೊಂದಿರುತ್ತದೆ. ಟ್ರಿಮ್ ಮಾಡಿದ ಕೆಂಪು ಅಂಚುಗಳಿಂದ ಕೂಡಿರುತ್ತದೆ. ಕಡಿಮೆ ನೀರಿನಲ್ಲೂ ಬೆಳೆಯಬಲ್ಲ ಈ ಸಸ್ಯದ ಎಲೆಗಳು ದಪ್ಪ ಹಾಗೂ ಮೃದುತ್ವದಿಂದ ಕೂಡಿರುತ್ತವೆ. ಗಾಢ ಗುಲಾಬಿ ಬಣ್ಣದ ಪೆಂಡ್ಯುಲಸ್ ಅಥವಾ ಗಂಟೆಯ ಆಕಾರದ ಹೂವುಗಳನ್ನು ಬಿಡುತ್ತದೆ. ಇದನ್ನು ಔಷಧೀಯ ಉದ್ದೇಶಗಳಿಗಾಗಿಯೂ ಬಳಸಲಾಗುತ್ತದೆ. ಇದರ ಎಲೆಯು ಅಂಚುಗಳ ಉದ್ದಕ್ಕೂ ಸಣ್ಣ ಸಣ್ಣ ಚಿಕಣಿ ಸಸ್ಯಗಳನ್ನು ಉತ್ಪಾದಿಸುವ ಸಾಮರ್ಥ್ಯಕ್ಕೆ ಹೆಸರುವಾಸಿಯಾಗಿದ್ದು, ಬಾಲ್ಯದಲ್ಲಿ ನಾವು ಪುಸ್ತಕದ ಮಧ್ಯದಲ್ಲಿಟ್ಟು ಎಲೆಯಿಂದ ಮೂಡುವ ಸಣ್ಣ ಸಸಿಗಳಿಗಾಗಿ ಕಾಯುತ್ತಿದ್ದೆವು. ಅದೆಷ್ಟೋ ಸಲ ಪುಸ್ತಕದ ಒಳಗೆ ಎಲೆ ಇಟ್ಟಿರುವುದನ್ನು ಮರೆತು ಪೂರ್ತಿ ಪುಸ್ತಕವೇ ಹಾಳಾಗಿದ್ದೂ ಇದೆ.

–ಡಾ. ಮೈತ್ರಿ ಭಟ್, ವಿಟ್ಲ